## ಆತ್ಮವಿಸ್ಮರಣೆ



ಒಂದು ಹದ್ದಿನ ಮೊಟ್ಟೆಯು ಹೇಗೋ ಕೋಳಿಯ ಗೂಡಿನಲ್ಲಿ ಸೇರಿಕೊಂಡಿತು. ಕೋಳಿಯು ತನ್ನ ಮೊಟ್ಟೆಗಳಿಗೆ ಕಾವು ಕೊಡುವಂತೆ ಅದಕ್ಕೂ ಕೊಟ್ಟಿತು. ಮೊಟ್ಟೆಯೊಡೆದ ನಂತರ ಹದ್ದಿನ ಮರಿಯೂ ಕೋಳಿ ಮರಿಗಳ ಜೊತೆ ಬೆಳೆಯತೊಡಗಿತು, ಅವುಗಳಂತೆಯೆ ವರ್ತಿಸತೊಡಗಿತು ಮತ್ತು ಅವುಗಳಂತೆಯೇ ಕೂಗುತ್ತಿತ್ತು. ಅವುಗಳಂತೆಯೇ ಅದಕ್ಕೂ ಎತ್ತರ ಹಾರುವುದಕ್ಕೆ ಆಗುತ್ತಿರಲಿಲ್ಲ.

ಒಂದು ದಿನ ಒಂದು ಹದ್ದು ಮುಗಿಲೆತ್ತರದಲ್ಲಿ ಹಾರುತ್ತಿರುವುದನ್ನು ನೋಡಿ ಅದಕ್ಕೆ ಆಶ್ಚರ್ಯವಾಯಿತು. ಅದು ಬೇರೆ ಕೋಳಿ ಮರಿಗಳನ್ನು "ಅದು ಯಾವ ಹಕ್ಕಿ?" ಎಂದು ಕೇಳಿತು. ಅವು ಹೇಳಿದವು, "ಅದು ಹದ್ದು. ಅದೊಂದು ಅದ್ಭುತ ಪಕ್ಷಿ", ಎಂದು . "ನಾನೂ ಅದರಂತೆಯೇ ಹಾರಬೇಕು"—ಎಂದಿತು ಆ ಮರಿಹದ್ದು. ಕೋಳಿಮರಿಗಳು ಹೇಳಿದವು, : "ಇಲ್ಲ, ಇಲ್ಲ, ನೀನು ಕೋಳಿಮರಿ. ನಿನಗೆ ಹದ್ದಿನಂತೆ ಹಾರಲಾಗುವುದಿಲ್ಲ. ಭೂಮಿಯ ಮೇಲೆಯೇ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ, ಸ್ವಲ್ಪ ಸ್ವಲ್ಪ ಹಾರಬಹುದಷ್ಟೆ."

ಮರಿಹದ್ದು ಅವುಗಳ ಮಾತನ್ನು ನಂಬಿ ಬೇರೆ ಕೋಳಿಗಳಂತೆಯೇ ಬಾಳಿ ಪ್ರಾಣ ಬಿಟ್ಟಿತು. ಅದಕ್ಕೆ ತನ್ನ ನೈಜ ಸಾಮರ್ಥ್ಯದ ಅರಿವಾಗಲೇ ಇಲ್ಲ. ಹಾಗೆಯೇ ನಮ್ಮ ನೈಜ ಸಾಮರ್ಥ್ಯವನ್ನು ಮರೆತು ಉನ್ನತ ಗುರಿಯನ್ನು ತಲಪುವ ಅವಕಾಶವನ್ನು ಕಳೆದುಕೊಳ್ಳುತ್ತೇವೆ. ◆